



ಜೋಗತಿ ಮಂಜಮ್ಮ ಅವರ ಜೊತೆ ಶಿಲ್ಪಾ ಮತ್ತು ಆದಿತ್ಯ



ಜೋಗಮ್ಮ



ಗಾಯನ ಮತ್ತು ಕಲಿಕೆಯ ತರಗತಿ. ಭಾನುವಾರ ಹೊರತುಪಡಿಸಿ ಉಳಿದೆಲ್ಲ ದಿನ ಬೆಳಿಗ್ಗೆ 8ರಿಂದ 9.30ರ ತನಕ ಚೌಡಕಿಪದ ಹಾಡುತ್ತಿದ್ದೆವು. ಲಾಕ್‌ಡೌನ್ ಕಾರಣಕ್ಕೆ ಆ ಹಾಡುಗಾರಿಕೆಯನ್ನು ಆನ್‌ಲೈನ್‌ಗೆ ವರ್ಗಾಯಿಸಿಕೊಂಡಿದ್ದೇವೆ. ಪ್ರತಿ ಭಾನುವಾರ ಆನ್‌ಲೈನ್‌ನಲ್ಲಿ ಸಂಗೀತ ಅಭ್ಯಾಸ ಮಾಡುತ್ತಿದ್ದೇವೆ. ಅನಿಯಮಿತವಾಗಿ ಹಾಡುಗಳನ್ನೂ ಹಾಡುತ್ತೇವೆ. ಆದರೆ, ಪಾರ್ಕ್‌ನಲ್ಲಿ ಹಾಡುವ ಹಾಡುಗಳೇ ಬೇರೆ. ಬಯಲು ವಾತಾವರಣದಲ್ಲಿ ಚೌಡಕಿ ಪದದ ಖದರ್ ಬೇರೆಯೇ ಇರುತ್ತದೆ. ಅದನ್ನು ನಾಲ್ಕುಗೋಡೆಯ ಮಧ್ಯದಲ್ಲಿ ಹಾಡಿದರೆ ಶಬ್ದದ ಕಂಪನ ಹಿಂದಿರುಗಿ ಕೇಳುತ್ತದೆ.

ನಮ್ಮನ್ನು ಪ್ರಭಾವಿಸಿದ ಜನಪದ ಹಾಡುಗಾರರನ್ನು ನಾವು ಇಮಿಟೇಟ್ ಮಾಡುತ್ತೇವೆ. ಜನಪದದ ಮೂಲ ಗಾಯಕರು ನಮ್ಮಂತೆ ಮಾತಾಡಲ್ಲ, ನಮ್ಮಂತೆ ಇರುವುದೂ ಇಲ್ಲ. ನಾನು ನಮ್ಮ ಅಜ್ಜಿಯ ಟೋನ್ ಸಾಧ್ಯವಾದಷ್ಟು ತರುತ್ತೇನೆ. ನಮ್ಮ ಅಜ್ಜಿ ನಮ್ಮ ಸೋದರತ್ತೆ ಹಾಡುತ್ತಾರೆ. ಅವರಿಬ್ಬರ ಹಾಡಿನಲ್ಲಿಯೇ ಸಾಕಷ್ಟು ವ್ಯತ್ಯಾಸ ಇರುತ್ತದೆ. ನಾನೂ ಎರಡು ವರ್ಷ ಅಭ್ಯಾಸ ಮಾಡಿದ ನಂತರ ಒಂದಿಷ್ಟು ಹಾಡುತ್ತಿದ್ದೇನೆ. ಮೊದಲೆಲ್ಲ ಭಾವಗೀತೆ ಮಾದರಿಯಲ್ಲಿ ಚೌಡಕಿಪದ ಹಾಡಿದ್ದಿದೆ.

ಇನ್ನೇನು ಕೆಲವೇ ದಿನಗಳಲ್ಲಿ ನಮ್ಮ ಯೋಜನೆಗೆ ಬದಲಾವಣೆ ತರಬೇಕು ಎಂದುಕೊಂಡಿದ್ದೇವೆ. ಬೆಂಗಳೂರಿನಲ್ಲಿ ನಮ್ಮ ಕೆಲಸ ಹೇಳಿಕೊಡುವುದಕ್ಕೆ ಮಾತ್ರ ಸೀಮಿತವಾಗಿದೆ. ಸಂಶೋಧನೆಗೆ ಅವಕಾಶ ಇಲ್ಲಿಲ್ಲ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಯಾವುದಾದರೂ ಹಬ್ಬ–ಜಾತ್ರೆ ಇದ್ದರೆ ತಕ್ಷಣಕ್ಕೆ ಹೋಗಲು ಆಗುವುದಿಲ್ಲ. 600–800 ಕಿ.ಮೀ. ದೂರದಲ್ಲಿ ಇರುವ ನಾವು ಅಲ್ಲಿನ ಹಬ್ಬ ತಿಳಿದು ಹೋಗುವಷ್ಟರಲ್ಲಿ ಅದು ಮುಗಿದೇ ಹೋಗುತ್ತದೆ. ಆ ಕಾರಣಕ್ಕೆ ಮೂರು ವರ್ಷ ಕ್ಷೇತ್ರಕಾರ್ಯವನ್ನು ಗಂಭೀರವಾಗಿ ಮಾಡುವ ಉದ್ದೇಶದಿಂದ ಕಲಬುರ್ಗಿಯಲ್ಲಿ ನೆಲೆಸಲು ನಿರ್ಧರಿಸಿದ್ದೇವೆ.

## ರಾಕ್ ಸ್ಟಾರ್ ರಾಧಕ್ಕ

ರಾಧಾ ರಾಕ್ ಸ್ಟಾರ್ ಆರ್ಟಿಸ್ಟ್. ಅವರ ಆರೋಗ್ಯ ಮೊದಲಿನಷ್ಟು ಚೆನ್ನಾಗಿಲ್ಲ. ಅವರ ಉತ್ಸಾಹಕ್ಕೆ ಆರೋಗ್ಯ ಸಹಕರಿಸುತ್ತಿಲ್ಲ. ಹಾಗಾಗಿ ಓಡಾಟಕ್ಕೆ ಬ್ರೇಕ್ ಹಾಕಿದ್ದಾರೆ. ಅವರ ಹಾಡುಗಾರಿಕೆಯನ್ನು ಕೇಳಿದರೆ ಯಾರಾದರೂ ಅವರ ಅವರ ಫ್ಯಾನ್ ಆಗಿಬಿಡುತ್ತಾರೆ. ನಾನು ಮೊದಲಬಾರಿ ಅವರ ಹಾಡು ಕೇಳಿದಾಗ ಮೈ ಕೂದಲುಗಳು ಮುಳ್ಳಿನಂತಾಗಿದ್ದವು. ಮಂಜಮ್ಮ ನನಗೆ ಅಕ್ಕೋರು, ಗುರುಗಳು ಕೂಡ. ಚೌಡಕಿ ಹಾಡು ಹೇಳಿಕೊಟ್ಟಿದ್ದಾರೆ. ನಾನು ಎರಡು ವರ್ಷ ಕಲಿತಿದ್ದೇನೆ.

ಒಮ್ಮೆ ಅವರ ಜೋಡಿ ಸೇರಿ ಕಾರ್ಯಾಗಾರ ಮಾಡಿದೆವು. ಅವರು ಎಲ್ಲರಿಗೂ ಪದಗಳನ್ನು ಹೇಳಿಕೊಟ್ಟರು. ಹೀಗೆಯೇ ಮಾಡುತ್ತಿರಬೇಕು ಎಂಬ ಆಸೆಯೂ ಇದೆ. ಆದರೆ ಅದಕ್ಕೆ ಶಿಬಿರಾರ್ಥಿಗಳನ್ನು ಎಲ್ಲಿಂದ ತರುವುದು? ಇಂತಹ ಕಲೆಯಲ್ಲಿ ಸಾಮಾನ್ಯವಾಗಿ ನಿಮ್ಮ ವರ್ಗದ ಜನ ಇರುತ್ತಾರೆ. ಅವರು ಅವರ ಸಮುದಾಯದಲ್ಲಿಯೇ ಹುಡುಕುತ್ತಾರೆ. ನನ್ನ ಕನಸಿನಲ್ಲಿ ಜಾತಿ, ಧರ್ಮ, ವರ್ಗದ ಕಟ್ಟಳೆಯ ಆಚೆ ಜನಪದವನ್ನು ತೆಗೆದುಕೊಂಡು ಹೋಗಬೇಕು ಎಂದಿದೆ. ಆಂಗ್ಲೊ ಇಂಡಿಯನ್, ಮುಸ್ಲಿಂ ಎಲ್ಲರಿಗೂ 'ನಮ್ಮದು ಇದು' ಎನ್ನುವ ಭಾವ ಮೂಡಿಸಬೇಕು.

ನಾನು ಜಾನಪದ ಜಗತ್ತಿನಲ್ಲಿ ಆವಿಷ್ಕಾರ ಮಾಡುತ್ತಿದ್ದೇನೆಯೇ ಹೊರತು ಜಾನಪದ ಗಾಯಕಿಯಾಗುವುದು ನನ್ನ ಪ್ರಯತ್ನವಲ್ಲ. ಅದಾಗಲು ಸಾಧ್ಯವೂ ಇಲ್ಲ. ಕಲಬುರ್ಗಿ ಇಲ್ಲವೆ ಬೀದರ್ ಕೇಂದ್ರವಾಗಿ ಇಟ್ಟುಕೊಂಡು 'ಲೈವ್ ಜಾನಪದ ಮ್ಯೂಸಿಯಂ' ಮಾಡುವ ಆಸೆಯಿದೆ. ಡೊಳ್ಳು, ಕರಡಿ ಮಜಲು ಸೇರಿದಂತೆ ಭಿನ್ನ ಪ್ರಕಾರಗಳ ಜನಪದ ಕಲಾವಿದರನ್ನು ಒಟ್ಟಾಗಿಸಿ ಪ್ರತಿ ವರ್ಷ ಒಂದುವಾರ ಹಬ್ಬವನ್ನು ಮಾಡುವ ಕನಸು ಅರ್ಬನ್ ಫೋಕ್ ಪ್ರಾಜೆಕ್ಟ್ ಹೊಂದಿದೆ.

ನಾವು ಒಂದು ಕುಟುಂಬ ಕಟ್ಟುತ್ತಿದ್ದೇವೆ. ನಮ್ಮ ಅಜ್ಜಂದಿರು, ಅಜ್ಜಿಯಂದಿರು, ಕಾಕ, ಮಾವ, ಅತ್ತೆ, ಚಿಕ್ಕವ್ವ, ದೊಡ್ಡವ್ವಂದಿರನ್ನು ಆ ಕುಟುಂಬಕ್ಕೆ ಸೇರಿಸಿಕೊಳ್ಳುತ್ತಿದ್ದೇವೆ. ಕಾರ್ಪೊರೇಟ್ ರೀತಿಯಲ್ಲಿ ನಾವು ಕಾರ್ಯಕ್ರಮ ರೂಪಿಸುವುದಿಲ್ಲ. ನಮ್ಮ ಕೆಲಸ ಶೋ ಮಾಡುವುದು ಅಲ್ಲ. ನಮ್ಮೂರ ಯಲ್ಲಮ್ಮನ ಆಟ ಹೇಗಿದೆಯೋ ಹಾಗೆಯೇ ನಾವು ಆಟಗಳನ್ನು ಮಾಡಬೇಕು. ಜನಪದದಲ್ಲಿ ಇದು ಸರಿ, ಅದು ತಪ್ಪು ಎನ್ನುವಂತಹದ್ದಿಲ್ಲ. ನಮ್ಮ ಬದುಕು, ನಮ್ಮ ಸಮುದಾಯದ ಏಳಿಗಳು ಅದರಲ್ಲಿ ಸೇರಿದರೆ ಅದಕ್ಕೆ ಮೌಲ್ಯ ಇದ್ದೇ ಇರುತ್ತದೆ ಎಂದು ನಾನು ನಂಬಿದ್ದೇನೆ.''

ಅರ್ಬನ್ ಫೋಕ್ ಫೋರಂ ಸೆಷನ್ ವೀಕ್ಷಣೆಗೆ: ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
/urbanfolkproject